# ಸಣ್ಣ ಸಂಗತಿ - ಕೆ.ಎಸ್. ನರಸಿಂಹಸ್ವಾಮಿ

## ಕೃತಿಕಾರರ ಪರಿಚಯ

ಕೆ.ಎಸ್. ನರಸಿಂಹಸ್ವಾಮಿಯವರು ೨೬/೦೧/೧೯೧೫ ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದರು. ಇವರು ಶಿಲಾಲತೆ, ನವಪಲ್ಲವ ,ಇರುವಂತಿಗೆ, ದೀಪದಮಲ್ಲಿ, ಮನೆಯಿಂದ ಮನೆಗೆ ,ತೆರೆದ ಬಾಗಿಲು ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ೧೯೭೭ ರಲ್ಲಿ ಇವರ ತೆರೆದ ಬಾಗಿಲು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಇವರ ದುಂಡುಮಲ್ಲಿಗೆ ಕವನಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ. ಇವರು ೨೦೦೪ರಲ್ಲಿ ಮರಣಹೊಂದಿದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇವರನ್ನು ಪ್ರೇಮಕವಿ ಎಂದೇ ಗುರುತಿಸುತ್ತಾರೆ

ಪ್ರಸ್ತುತ ಪಧ್ಯಭಾಗವನ್ನು ಇವರ ' ಇರುವಂತಿಗೆ ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಒಂದು ವಾಕ್ಯದಲ್ಲಿ ಉತ್ತರಿಸಿ .

೧. ಹುಣ್ಣಿಮೆಯ ಕಣ್ಣು ಎಲ್ಲಿ ತೆರೆದಿದೆ ?

ಉ: ನಟ್ಟಿರುಳ ಕರಿಮುಗಿಲ ನೀರ್ ತುಂಬಿಗಳ ನಡುವೆ ಹುಣ್ಣಿಮೆಯ ಕಣ್ಣು ತೆರೆದಿದೆ.

೨. ಪುಟ್ಟ ಮಗುವು ತೊಟ್ಟಿಲಲ್ಲಿ ಹೇಗೆ ಮಲಗಿದೆ. ?

ಉ: ಪುಟ್ಟ ಮಗುವು ತೊಟ್ಟಿಲಲ್ಲಿ ಕಣ್ಣನ್ನು ಅರ್ಧ ಮುಚ್ಚಿ ಬರಿ ಮೈಯಲ್ಲಿ ಮಲಗಿದೆ.

೩. ಮೂಲೆಯಲ್ಲಿ ಇರುವುದೇನು ?

ಉ: ಮೂಲೆಯಲ್ಲಿ ಸಣ್ಣಗಿನ ದೀಪವಿದೆ.

೪. ನಿದ್ದೆ ಎಚ್ಚರಗಳಲ್ಲಿ ಯಾವ ಕೈ ದುಡಿಯುತ್ತಿದೆ ?

ಉ: ನಿದ್ದೆ ಎಚ್ಚರಗಳಲ್ಲಿ ಪೊರೆವ ಕೈ ದುಡಿಯುತಿದೆ.

೫. ಯಾವುದನ್ನು ಲೆಕ್ಕಿಸದೆ ಮಗು ಹೊದಿಕೆಯನ್ನು ಒದೆಯುತಿದೆ ?

ಉ: ನಿದ್ದೆ ಎಚ್ಚರಗಳಲ್ಲಿ ಪೊರೆವ ಕೈ ದುಡಿಯುವುದನ್ನು ಲೆಕ್ಕಿಸದೆ ಮಗು ಹೊದಿಕೆಯನ್ನು ಒದೆಯುತಿದೆ.

ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿ

೧. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ವಿವರಿಸಿ.

ಉ: ಸುರಿಯುತ್ತಿರುವ ಮಳೆ ನಿಂತು ಆಕಾಶ ಶುಭ್ರವಾಗಿ ಚಂದ್ರನು ಉದಯಿಸಿದ ಸಂದರ್ಭದಲ್ಲಿ ಕೋಣೆಯಲ್ಲಿ ಮಂಚದ ಮೇಲೆ ತಾಯಿಯು ಮಲಗಿದ್ದಾಳೆ. ಅಲ್ಲಿ ಪಕ್ಕದ ತೊಟ್ಟಿಲಲ್ಲಿ ಮಗುವು ಕಣ್ಣನ್ನು ಅರ್ಧ ಮುಚ್ಚಿ ಬರಿ ಮೈಯಲ್ಲಿ ಮಲಗಿದೆ. ಆಗ ತಾಯಿಯು ನಿದ್ದೆಗಣ್ಣಿನಲ್ಲಿದ್ದರೂ ಕೈ ನೀಡಿ ಮಗುವಿಗೆ ಹೊದಿಕೆಯನ್ನು ಸರಿಪಡಿಸುವಳು. ಮಗು ಅಪ್ರಯತ್ನಪೂರ್ವಕವಾಗಿ ಹೊದಿಕೆಯನ್ನು ಕಿತ್ತೆಸೆದು ಪುನಃ ಬರಿ ಮೈಯಲ್ಲಿ ಮಲಗಿದಾಗ ತಾಯಿಯು ಮತ್ತೆ ಮತ್ತೆ ಹೊದಿಕೆಯನ್ನು ಹೊದಿಸಿ ತನ್ನ ಮಗುವಿನ ಆರೈಕೆಯನ್ನು ಮಾಡುವಳು ಎಂದು ಕವಿ ವರ್ಣಿಸಿದ್ದಾರೆ.

೨. ಕವಿ ಯಾವ ಸಣ್ಣ ಸಂಗತಿಯನ್ನು ಈ ಕವನದಲ್ಲಿ ವಿವರಿಸಿದ್ದಾರೆ ?

ಉ: ಕವಿ ವಿವರಿಸುವ ಸಣ್ಣ ಸಂಗತಿಯು ವಾಸ್ತವವವಾಗಿ ಸದಾ ಕಾಲ ಕಾಪಾಡುವ ಕರುಣೆಯೊಂದರ ಸಂಕೇತವಾಗಿದೆ. ಹಗಲಿರುಳೆನ್ನದೆ ಸದಾ ತನ್ನ ಮಗುವಿನ ಆರೈಕೆಯಲ್ಲಿ ತನ್ನ ತಾಯ್ತನದ ಸಾರ್ಥಕ್ಯ ಪಡೆಯುವ ತಾಯಿಯ ಹೃದಯದ ತುಡಿತ -ಮಿಡಿತಗಳ ಗಹನವಾದ ತತ್ವದ ಸಂಕೇತವಾಗಿದೆ. ಇದು ಮನುಷ್ಯ ಮತ್ತು ಪ್ರಕೃತಿಗಿರುವ ಸಂಬಂಧವಿರಬಹುದೇ ? ಇದು ಇಡೀ ಜೀವ ಸಂಕುಲವನ್ನು ಕಾಪಿಡುವ ತಾಯಿ ಪ್ರಜ್ಞೆಯಿರಬಹುದೇ ಅದು ಸಣ್ಣ ಸಂಗತಿಯೆನ್ನಬಹುದೇ ?ಅಲ್ಲ ಎಂಬುದನ್ನು ಕವಿ ಸೂಚ್ಯವಾಗಿ ಹೇಳಿದ್ದಾರೆ.

೩. ಈ ಕವನದಲ್ಲಿ ಕವಿ ನೀಡಿರುವ ಪ್ರಾಕೃತಿಕ ಘಟನೆಗಳನ್ನು ತಿಳಿಸಿ.

ಉ: ಸಣ್ಣ ಸಂಗತಿ ಕವನದಲ್ಲಿ ಕವಿ ತಾಯ ಪಕ್ಕದಲ್ಲಿ ಮಲಗಿರುವ ಮಗು ನಟ್ಟಿರುಳು ತನ್ನ ಹೊದಿಕೆಯನ್ನು ಕಿತ್ತೆಸೆದಾಗ ,ಮತ್ತೆ ಮತ್ತೆ ತಾಯಿಯ ಕೈ ಮಗುವಿನ ಹೊದಿಕೆಯನ್ನು ಸರಿಪಡಿಸುವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ನೀರು ತುಂಬಿರುವ ಕರಿಮುಗಿಲು ,ಆಕಾಶಕ್ಕೆ ಹುಣ್ಣಿಮೆಯ ಕಣ್ಣು ತೆರೆದ ,ಬಾನ ಬೀದಿಗೆ ತಾರೆ ಬಂದಿವೆ ,ಸೋನೆಯ ಶ್ರುತಿಗೆ ಗಾಳಿಯೇ ಹಾಡುವ ಮೊದಲಾದ ಪ್ರಾಕೃತಿಕ ಚೌಕಟ್ಟಿನೊಳಗಿನ ದೊಡ್ಡ ಘಟನೆಗಳೊಂದಿಗೆ ಹೋಲಿಸಿ ವರ್ಣಿಸಲಾಗಿದೆ.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. " ತಾರೆ ಬಂದಿವೆ ಬಾನ ಬೀದಿಗೆ ."

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿಯವರು ಬರೆದ ಇರುವಂತಿಗೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿರುವ ಸಣ್ಣಸಂಗತಿ ಕವನದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ ಕವಿ ರಾತ್ರಿ ಸಮಯದ ಪ್ರಕೃತಿಯನ್ನು ವರ್ಣಿಸುವಾಗ ನಟ್ಟಿರುಳ ಕರಿ ಮುಗಿಲ ನೀರ ತುಂಬಿಗಳ ನಡುವೆ ಹುಣ್ಣಿಮೆಯ ಕಣ್ಣು ತೆರೆದಿದೆ. ಅಂದರೆ ಆಗ ತಾನೇ ಮಳೆ ಬಂದು ನಿಂತು ಆಕಾಶ ಶುಭ್ರವಾಗಿ ಚಂದ್ರನು ಆಕಾಶದಲ್ಲಿ ಗೋಚರಿಸುತ್ತಿದ್ದಾನೆ ,ಅಲ್ಲದೇ ತಾರೆಗಳು ಬಾನ ಬೀದಿಗೆ ಬಂದಿವೆ ಎಂದು ಪ್ರಾಕೃತಿಕ ಸನ್ನಿವೇಶ ವರ್ಣಿಸುವಾಗ ಈ ಮಾತು ಹೇಳಿದ್ದಾರೆ.

ಸ್ವಾರಸ್ಯ : ಜೋರಾಗಿ ಮಳೆ ಬಂದು ಆಗ ತಾನೇ ನಿಂತಿರುವ ಮಳೆಗಾಲದ ರಾತ್ರಿಯ ಪ್ರಾಕೃತಿಕ ಸನ್ನಿವೇಶವನ್ನು ಕವಿ ಇಲ್ಲಿ ವರ್ಣಿಸಿದ್ದಾರೆ.

೨. " ತಾಯಿ  ಕೈ ನೀಡಿ ಮತ್ತೆ ಹೊದಿಕೆಯನು ಸರಿಪಡಿಸುವಳು ."

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿಯವರು ಬರೆದ ಇರುವಂತಿಗೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿರುವ ಸಣ್ಣಸಂಗತಿ ಕವನದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಸುರಿಯುತ್ತಿರುವ ಮಳೆ ನಿಂತು ಆಕಾಶ ಶುಭ್ರವಾಗಿ ಚಂದ್ರನು ಉದಯಿಸಿದ ಸಂದರ್ಭದಲ್ಲಿ ಕೋಣೆಯಲ್ಲಿ ಮಂಚದ ಮೇಲೆ ತಾಯಿಯು ಮಲಗಿದ್ದಾಳೆ. ಅಲ್ಲಿ ಪಕ್ಕದ ತೊಟ್ಟಿಲಲ್ಲಿ ಮಗುವು ಕಣ್ಣನ್ನು ಅರ್ಧ ಮುಚ್ಚಿ  ಬರಿ ಮೈಯಲ್ಲಿ ಮಲಗಿದೆ. ಆಗ ತಾಯಿಯು ನಿದ್ದೆಗಣ್ಣಿನಲ್ಲಿದ್ದರೂ ಕೈ ನೀಡಿ ಮಗುವಿಗೆ ಹೊದಿಕೆಯನ್ನು ಸರಿಪಡಿಸುವಳು. ಮಗು ಅಪ್ರಯತ್ನಪೂರ್ವಕವಾಗಿ ಹೊದಿಕೆಯನ್ನು ಕಿತ್ತೆಸೆದು ಪುನಃ ಬರಿ ಮೈಯಲ್ಲಿ ಮಲಗಿದಾಗ ತಾಯಿಯು ಮತ್ತೆ ಮತ್ತೆ  ಹೊದಿಕೆಯನ್ನು ಹೊದಿಸಿ ತನ್ನ ಮಗುವಿನ ಆರೈಕೆಯನ್ನು ಮಾಡುವಳು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಇಡೀ ಜೀವಸಂಕುಲವನ್ನು ಕಾಪಾಡುವ ಪ್ರಕೃತಿ ಮಾತೆಯ  ಪ್ರಜ್ಞೆಯನ್ನು ವಿವರಿಸುವಾಗ ಕವಿ ತಾಯಿಯು ತನ್ನ ಮಗುವಿನ ಆರೈಕೆಯಲ್ಲಿ ತಾಯ್ತನದ ಸಾರ್ಥಕ್ಯ ಪಡೆಯುವ ಸನ್ನಿವೇಶಕ್ಕೆ ಹೊಂದಿಸಿ ವರ್ಣಿಸಿರುವುದನ್ನು ಇಲ್ಲಿ ನೋಡಹುದು.

೩. " ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ ."

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿಯವರು ಬರೆದ ಇರುವಂತಿಗೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿರುವ ಸಣ್ಣಸಂಗತಿ ಕವನದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಸೃಷ್ಟಿ ,ಪಾಲನೆ ಮತ್ತು ಪೊರೆಯುವ ಮೌಲ್ಯಗಳಿಗೆ ಸಂಬಂಧಿಸಿದ ಸಣ್ಣ ಸಂಗತಿಯನ್ನು ಕವಿ ವರ್ಣಿಸುತ್ತ ತಾಯಿ ಮಗು ಇಬ್ಬರೂ ಎಚ್ಚರದ ಸ್ಥಿತಿಯಲ್ಲಿ ಇಲ್ಲದಿದ್ದರೂ ತಾಯಿಗೆ ಮಗುವಿನ ಮೈ ಮೇಲೆ ಹೊದಿಕೆ ಇರಲಾರದು ಎಂಬ ಎಂದು ಅನಿಸಿ ಹೊದಿಕೆಯನ್ನು ಹೊದಿಸುತ್ತಿರುತ್ತಾಳೆ. ಆದರೆ ಪ್ರಪಂಚಕ್ಕೆ  ಆಗ ತಾನೇ ಕಾಲಿಟ್ಟಿರುವ ಆ ಮಗುವಿಗೆ ಈಗೀಗ ಪರಿಚಿತವಾಗುತ್ತಿರುವ ಹೊದಿಕೆಯನ್ನು ಕಿತ್ತೆಸೆಯುತ್ತಿದೆ. ಆ ಕೋಣೆಯಲ್ಲಿ ಏನು ನಡೆಯುತ್ತಿದೆ ಎಂಬ ಅರಿವಿಲ್ಲದೆ ಹೊರ ಜಗತ್ತಿನಲ್ಲಿ ಎಲ್ಲರೂ ನಿಶ್ಚಿಂತೆಯಿಂದ ಮಲಗಿದ್ದಾರೆ. ಆದರೆ ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಇಡೀ ಜೀವ ಸಂಕುಲವನ್ನು ಕಾಪಿಡುವ ತಾಯಿಯ ಪ್ರಜ್ಞೆಯನ್ನು ,ವಾಸ್ತವವಾಗಿ ಸದಾ ಕಾಲ ಕಾಪಾಡುವ ದೇವರ ಕರುಣೆಯನ್ನು ವಿವರಿಸುವ ರೀತಿಯಲ್ಲಿ ಕವಿ ಮೇಲಿನಂತೆ ವರ್ಣಿಸಿದ್ದಾರೆ.

ಕೊಟ್ಟಿರುವ ಪ್ರಶ್ನೆಗೆ ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿ.

೧. ಕವಿ ಯಾವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ಘಟನೆಗಳೊಂದಿಗೆ ಹೋಲಿಕೆ ಮಾಡಿದ್ದಾರೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉ: ರಾತ್ರಿಸಮಯದ ಪ್ರಕೃತಿ ವರ್ಣನೆ ಮಾಡುತ್ತ ಕವಿಯು ನಟ್ಟಿರುಳ ಕರಿ ಮುಗಿಲ ನೀರ್ ತುಂಬಿಗಳ ನಡುವೆ ಚಂದ್ರ ಮೂಡಿರುವುದನ್ನು ತಾರೆಗಳು ಉದಯಿಸಿರುವುದನ್ನು ವರ್ಣಿಸುತ್ತ ಕೋಣೆಯಲ್ಲಿ ತಾಯಿಯು ಮಲಗಿರುವ ಮತ್ತು ಅದರ ಪಕ್ಕದ ತೊಟ್ಟಿಲಲ್ಲಿ ಮಗುವೊಂದು ಬರಿ ಮೈಯಲ್ಲಿ ಅರ್ಧಕಣ್ಣುಮುಚ್ಚಿ ಮಲಗಿರುವ ಸನ್ನಿವೇಶವನ್ನು ಸೃಷ್ಟಿಸುತ್ತಾರೆ. ಮಳೆ ಬಂದು ಇಳೆ ತಂಪಾದ ಪರಿಸರದಲ್ಲಿ ಜೀವ ಸೃಷ್ಟಿಯೊಂದು ಮೊಳಕೆಯೊಡೆದಿದೆ. ಅಲ್ಲಿ ನೀರವತೆಯಿದ್ದರೂ ಸೃಷ್ಟಿ ,ಪಾಲನೆ, ಮತ್ತು ಪೊರೆಯುವ ಕ್ರಿಯೆಯನ್ನು ಇಲ್ಲಿ ನೋಡಬಹುದು. ಮಗುವಿನ ಮೈಯಲ್ಲಿ ಹೊದಿಕೆಯಿರಲಾರದೆಂದು ಭಾವಿಸುವ ತಾಯಿಯು ಮಲಗಿದ್ದರೂ ಅವಳ ಕೈ ಮಗುವಿಗೆ ಹೊದಿಕೆ ಹೊದೆಸುವ ಕಾರ್ಯವನ್ನು ಮತ್ತೆ ಮತ್ತೆ ಮಾಡುವುದನ್ನು ಹೇಳುವ ಕವಿಯು ಲೌಕಿಕ ಅಲೌಕಿಕದ ನಡುವೆ ಸೇತುವೆ ಕಲ್ಪಿಸಿರುವುದನ್ನು ಇಲ್ಲಿ ನೋಡಬಹುದು. ಕಾಣದ ಕರುಣೆಯ ಕೈ ಜಗತ್ತನ್ನು ಪೊರೆಯುವ ಹಾಗೆ ತಾಯಿಯು ತನ್ನ ಮಗುವಿನ ಆರೈಕೆಯಲ್ಲಿ ತಾಯ್ತನದ ಸಾರ್ಥಕತೆ ಅನುಭವಿಸುವ ಸನ್ನಿವೇಶವನ್ನು ಕವಿ ಇಲ್ಲಿ ವಿವರಿಸಿದ್ದಾರೆ. ಸಣ್ಣನೆಯ ದೀಪದ ಬೆಳಕಿನಲ್ಲಿ ಅರ್ಧ ಕಣ್ಣು ಮುಚ್ಚಿ  ಮಲಗಿದ ಮಗುವನ್ನು ಕವಿ ನಟ್ಟಿರುಳ ನಡುವೆ ಹುಣ್ಣಿಮೆಯ ಕಣ್ಣು ತೆರೆದಿರುವುದಕ್ಕೆ ಹೋಲಿಸಿದ್ದಾರೆ. ಮನುಷ್ಯ ಮತ್ತು ಪ್ರಕೃತಿಗಿರುವ ಸಂಬಂಧವನ್ನು ,ಇಡೀ ಜೀವ ಸಂಕುಲವನ್ನು ಕಾಪಿಡುವ ಪ್ರಜ್ಞೆಯನ್ನು ಕವಿ ಪ್ರಕೃತಿಯ ಘಟನೆಗಳ ಮೂಲಕ ವರ್ಣಿಸಿದ್ದಾರೆ.

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಛಂದಸ್ಸು ಎಂದರೇನು ?

ಉ: ಪದ್ಯಗಳನ್ನು ರಚಿಸುವಾಗ ನಿರ್ಧಿಷ್ಟ ನಿಯಮಗಳನ್ನು ಆಚರಿಸಲಾಗುವುದು. ಅದೇ ಛಂದಸ್ಸು.

೨. ಪ್ರಾಸ ಎಂದರೇನು ? ಅದರ ವಿಧಗಳಾವುವು ?

ಉ: ಪದ್ಯದ ಪ್ರತಿಯೊಂದು ಪಾದದ ಎರಡನೆಯ ಅಕ್ಷರದಲ್ಲಿ ಅಥವಾ ಪ್ರತಿಸಾಲಿನ ಕೊನೆಯ ಅಕ್ಷರದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದೇ ಪ್ರಾಸ. ಪ್ರಾಸದ ವಿಧಗಳು ಮೂರು .

ಆದಿ ಪ್ರಾಸ : ಪ್ರತೀ ಸಾಲಿನ ಎರಡನೆಯ ಅಕ್ಷರ ಪ್ರಾಸವಾಗಿರುವುದು.

ಅಂತ್ಯಪ್ರಾಸ : ಪ್ರತೀ ಸಾಲಿನ ಕೊನೆಯ ಅಕ್ಷರ ಪ್ರಾಸವಾಗಿರುವುದು.

ಮಧ್ಯಪ್ರಾಸ : ಪ್ರತೀ ಸಾಲಿನ ಮಧ್ಯದಲ್ಲಿ ಬರುವ ಪ್ರಾಸ .

೩.ಗಣ ಎಂದರೇನು ? ವಿವರಿಸಿ.

ಉ: ಗಣ ಎಂದರೆ ಗುಂಪು ಎಂದರ್ಥ .ಪದ್ಯದ ಪ್ರತೀ ಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪೇ ಗಣ .

ಮಾತ್ರೆಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಅದು -ಮಾತ್ರಾಗಣ

ಅಕ್ಷರಗಳ ಲೆಕ್ಕಾಚಾರದಿಂದ ಗುಂಪುಮಾಡಿದರೆ ಅದು -ಅಕ್ಷರಗಣ

ಅಂಶಗಳ ಆಧಾರದಿಂದ ಗುಂಪು ಮಾಡಿದರೆ  ಅದು -ಅಂಶ ಗಣ